# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**
ನೊಂದಣಿ ಸಂಖ್ಯೆ :

## ಪಿಎಸ್‌ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಹೊಸ ಶಿಕ್ಷಣ ನೀತಿಯ ಧ್ಯೇಯೋದ್ದೇಶಗಳು ಹಾಗೂ ಅದರ ಕುರಿತು ವಿಶ್ಲೇಷಿಸಿರಿ.

ಅಥವಾ

2. ಹವಾಮಾನ ವೈಪರಿತ್ಯ ಕುರಿತು ಚರ್ಚಿಸಿರಿ.

ಅಥವಾ

3. ಸೈಬರ್ ಅಪರಾಧಕ್ಕೆ ಕಾರಣಗಳು, ಪರಿಣಾಮಗಳು ಹಾಗೂ ಪರಿಹಾರಗಳ ಕುರಿತು ವಿವರಿಸಿರಿ.

ಅಥವಾ

4. “ಪಕ್ಷಾಂತರ ಪ್ರಜಾಪ್ರಭುತ್ವದ ಪಿಡುಗು” ಎಂಬುದನ್ನು ವಿಮರ್ಶಾತ್ಮಕವಾಗಿ ಚರ್ಚಿಸಿರಿ

ಅಥವಾ

5. ಪೊಲೀಸ್ ಸುಧಾರಣೆಯ ಅಗತ್ಯತೆ ಹಾಗೂ ಸಮುದಾಯ ಪೋಲಿಸಿಂಗ್ (community policing) ಕುರಿತು ವಿವರಿಸಿರಿ.

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಒಂದು ಕಾಡಿನಲ್ಲಿ ಆನೆಯೊಂದು ಸಿಕ್ಕಿದ ಎಲ್ಲಾ ಪ್ರಾಣಿಗಳನ್ನೆಲ್ಲಾ ಕೊಲ್ಲುತ್ತಿತ್ತು. ಹೀಗೆ ಆ ಆನೆಗೆ ಸಿಕ್ಕು ಅನೇಕ ಪ್ರಾಣಿಗಳು ಸತ್ತು ಹೋದವು. ಆಗ ಪ್ರಾಣಿಗಳೆಲ್ಲಾ ಸಭೆ ಸೇರಿ ಆನೆಯ ಹಾವಳಿಯಿಂದ ಪಾರಾಗಲು ಒಂದು ಉಪಾಯವನ್ನು ಯೋಚಿಸಿದವು. ಪ್ರಾಣಿಗಳೆಲ್ಲಾ ಒಂದಾಗಿ ಆನೆಯ ಬಳಿ ಬಂದು 'ನೀನೇ ಕಾಡಿನ ರಾಜನಾಗಬೇಕು" ಎಂದು ಕೇಳಿಕೊಂಡವು. ಆನೆ ಅದಕ್ಕೆ ಒಪ್ಪಿ ಹೆಮ್ಮೆಯಿಂದ ಬೀಗಿತು.

ಹೀಗಿರುವಾಗ ಪ್ರಾಣಿಗಳೆಲ್ಲಾ ಸೇರಿ ಮೊದಲೇ ಒಂದು ಸ್ಥಳದಲ್ಲಿ ಕೆಸರಿನ ಹೊಂಡವನ್ನು ಸಿದ್ದಮಾಡಿದ್ದವು. ಆ ಹೊಂಡದ ಮೇಲೆ ಮರದ ರೆಂಬೆ ಕೊಂಬೆಗಳನ್ನೆಲ್ಲಾ ಹಾಕಿ ಮರೆ ಮಾಡಿದ್ದವು. ಮರದಿಂದ ಸಿಂಹಾಸನವನ್ನು ಮಾಡಿ ಇಟ್ಟು ಆನೆಯನ್ನು ಪಟ್ಟಾಬಿಷೇಕಕ್ಕಾಗಿ ಕರೆತಂದವು.

ಪ್ರಾಣಿಗಳ ಈ ತಂತ್ರ ಅರಿಯದ ಆನೆಯು ಗಂಭೀರವಾಗಿ ಆ ಸ್ಥಳಕ್ಕೆ ನಡೆಯಿತು. ಮುಚ್ಚಿಟ್ಟಿದ ಕೆಸರ ಹೋಂಡದಲ್ಲಿ ಆನೆಯು ಬಿದ್ದು ಬಿಟ್ಟಿತು. ಎಲ್ಲಾ ಪ್ರಾಣಿಗಳು ಸೇರಿ ಆನೆಯು ಹೊಂಡದಿಂದ ಬರದಂತೆ ನೋಡಿಕೊಂಡವು. ಕೆಸರಿನಲ್ಲಿ ಸಿಕ್ಕಕೊಂಡ ಆನೆಯು ಹೊರಕ್ಕೆ ಬರಲಾಗದೆ ಹಸಿವಿನಿಂದ ಒದ್ದಾಡಿ ಸತ್ತು ಹೋಯಿತು.

ಎಲ್ಲಾ ಪ್ರಾಣಿಗಳು ಆನೆಯ ಸಾವಿನಿಂದ ಸಂತಸಗೊಂಡವು. ಅಪಾಯ ಬಂದಾಗ ಉಪಾಯದಿಂದ ಪಾರಾಗಬೇಕು ಎಂಬ ಗುಣಪಾಠವನ್ನು ತಿಳಿದುಕೊಂಡವು.

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**Adam had learned from his friends that lying is the easiest way out of any situation. So he became fond of lying and enjoyed telling small lies. when his parents caught him and warned him against telling lies. he shrugged them off, saying, "lies never harm anyone!" Adam's father decided to explain to him why lying is bad.**

**One evening Adam and his father were walking down the street with some groceries. just then, they saw a car rammed into a book store. Adam's father asked a man what happened and he replied "The car driver lied to his father that he could see without spectacles. they both were in the car when the accident happened . the father is seriously hurt. I'm sure the boy regrets ever lying". Adam's father looked at Adam and said "See Adam, a lie is so dangerous! It can hurt people!" Adam realized huge cost of a lie and stopped lying.**

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II. ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.**

ರೈತನೊಬ್ಬ ಬೆಕ್ಕೊಂದನ್ನು ಸಾಕಿದ್ದ. ಅದನ್ನು ತುಂಬಾ ಚೆನ್ನಾಗಿ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ. ಹಾಗೆಯೇ ಆತನಲ್ಲಿ ಕಪ್ಪು ಬಣ್ಣದ ಹಸುವೊಂದಿತ್ತು. ಆ ಹಸು ಕೊಡುವ ಹಾಲು ಕುಡಿದು ಬೆಕ್ಕು ತುಂಬಾ ಸೊಕ್ಕಿನಿಂದ ಬೆಳೆದಿತ್ತು. ಅಲ್ಲದೆ ಅದಕ್ಕೆ ಕೊಬ್ಬು ಕೂಡಾ ಬಂದಿತ್ತು. ಹೀಗಾಗಿ ಆ ಬೆಕ್ಕು ರೈತನ ದವಸ–ಧಾನ್ಯಗಳನ್ನು ತಿಂದು ಹಾಳು ಮಾಡುತ್ತಿದ್ದ ಇಲಿ– ಹೆಗ್ಗಣಗಳನ್ನು ಕಂಡರೂ ಅವುಗಳನ್ನು ಬೇಟೆಯಾಡದೇ ಸದಾ ಕೊಬ್ಬಿನಿಂದ ಮಲಗಿಕೊಂಡೇ ಇರುತ್ತಿತ್ತು. ಇದನ್ನು ಗಮನಿಸಿದ ಹಸು, "ಬೆಕ್ಕೇ.... ಬೆಕ್ಕೇ! ಹೀಗೆ ಸೋಮಾರಿಯಾಗಿ ಬಾಳೊದು ಸರಿನಾ? ಯಜಮಾನನ ದವಸಗಳನ್ನು ಹಾಳು ಮಾಡುತ್ತಿರುವ ಇಲಿಗಳನ್ನೇಕೆ ಬೇಟಿಯಾಡುತ್ತಿಲ್ಲ? ಮಾಲೀಕನಿಗೆ ಅನ್ಯಾಯ ಮಾಡುವುದು ನ್ಯಾಯವಾ" ಎಚಿದಿತು. ಬೆಕ್ಕು ಕಣ್ಣು ಕೆಂಪಗೆ ಮಾಡಿಕೊಂಡು ಮೀಸೇ ಕುಣಿಸುತ್ತಾ " ಎಲಾ ಹಸುವೇ, ನೀನು ನಂಗೆ ಬುದ್ಧಿ ಹೇಳುತ್ತಿಯಾ? ನಿಂಗ್ಯಾಕೆ ಉಸಾಬರೀ" ಎಂದು ಮೂದಲಿಸಿತು. ಹಸು ಬೆಕ್ಕಿಗೆ ಬುದ್ಧಿ ಕಲಿಸುವ ಹುನ್ನಾರ ಮಾಡಿ ಹಾಲು ಕರೆಯುವುದನ್ನೇ ನಿಲ್ಲಿಸಿತು. ಆಗ ಬೆಕ್ಕಿಗೆ ಹಾಳು ಸಿಗದೇ ಉಪವಾಸ ಮಲಗಬೇಕಾಯತು. ಹೀಗೇ ಕೆಲವು ದಿನಗಳವರೆಗೆ ಹಸು ಹಾಲು ಕರೆಯುವುದನ್ನು ನಿಲ್ಲಿಸಿತು.

ಹಾಲು – ಮೊಸರು ದೊರಕದೇ ಬೆಕ್ಕು ಉಪವಾಸದಿಂದ ಪರದಾಡುವಂತಾಯ್ತು. ಆಗ ಬೆಕ್ಕಿಗೆ ತನ್ನ ತಪ್ಪಿನ ಅರಿವಾಯಿತು. ಅಕ್ಕರೆಯಿಂದ ಸಾಕಿ–ಸಲಹಿದ ಮಾಲೀಕನ ದುಡಿಮೆಯ ಫಲವನ್ನು ಹಾಳು ಮಾಡುವ ಇಲಿ–ಹೆಗಣ್ಣಗಳನ್ನು ಬೇಟಿಯಾಡುವುದಕ್ಕೆ ಶುರು ಮಾಡಿತು. ಇದರಿಂದ ಹರುಷಗೊಂಡ ಹಸು ಮತ್ತೆ ಹಾಲು ಕರೆಯತೊಡಗಿತು.